**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>**
**<u>ಎಸ್.ಸಿ.ನಂ.3/2026</u>**

ಪಿರ್ಯಾದುದಾರರು : ಸರ್ಕಾರದ ಪರ ವೈಟ್ ಫೀಲ್ಡ್ ಸಂಚಾರ ಪೊಲೀಸರು

- ವಿರುದ್ಧ -

ಆರೋಪಿ : ತಿಲಕ್ ರಾಜ್ ಭಟ್
ತಂದೆ: ಕೃಷ್ಣ ಭಟ್,
ವಯಸ್ಸು 29 ವರ್ಷ
ವಾಸ: ನಂ. 180, ಪ್ಲಾಟ್ ನಂ. 3,
ಪಟ್ಟಂದೂರು ಅಗ್ರಹಾರ,
ಐ.ಟಿ.ಪಿ.ಎಲ್. ಹತ್ತಿರ,
ಕಾಟೇರಮ್ಮ ದೇವಸ್ಥಾನ ECC ರಸ್ತೆ,
ವೈಟ್ ಫೀಲ್ಡ್.

<u>ದೋಷಾರೋಪಣೆ</u>

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಶ್ರೀನಿವಾಸ್ @ ತರಕಾರಿ ಸೀನಾ @ ನವೀನ್ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ :

1 ನೇ ಆರೋಪಿಯಾದ ನೀನು ದಿನಾಂಕ 05.04.2025 ರಂದು ಬೆಳಿಗ್ಗೆ ಸುಮಾರು 11:40 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯ ನಡುವಿನ ಸಮಯದಲ್ಲಿ ಬೆಂಗಳೂರು ನಗರ ವೈಟ್ ಫೀಲ್ಡ್ ಸಂಚಾರ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ಪಟ್ಟಂದೂರು ಅಗ್ರಹಾರ ಕೆರೆ ಏರಿ ರಸ್ತೆಯಲ್ಲಿ ಪಟ್ಟಂದೂರು ಗ್ರಾಮದ ರಸ್ತೆ ಕಡೆಯಿಂದ ಇಸಿಸಿ ರಸ್ತೆ ಕಡೆಗೆ ಅಂದರೆ ಪಶ್ಚಿಮ ದಿಕ್ಕಿನ ಕಡೆಯಿಂದ ಪೂರ್ವ ದಿಕ್ಕಿನ ಕಡೆಗೆ ನೊಂದಣಿ ಸಂಖ್ಯೆ ಇಲ್ಲದ ವಾಟರ್ ಟ್ಯಾಂಕರ್ ಜೋಡಣೆಗೊಂಡ ಟ್ರಾಕ್ಟರ್ ನಂ. KA-40-TA-9791 ವಾಹನವನ್ನು ದುಡುಕಿನಿಂದ ಹಾಗೂ ನಿರ್ಲಕ್ಷತೆಯಿಂದ ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿ, ಸಾರ್ವಜನಿಕರ ಜೀವ ಮತ್ತು ಸುರಕ್ಷತೆಗೆ ಅಪಾಯ ಉಂಟುಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ. 281 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 1 ನೇ ಆರೋಪಿಯಾದ ನೀನು ನಿನ್ನ ಮಕ್ಕಳಾದ ಕುಮಾರಿ ಯಾನ್ಸಿಕ ಭಟ್ಟ (8 ವರ್ಷ) ಹಾಗೂ ಕುಮಾರಿ ಹಿಮಂಸಿಕ ಭಟ್ಟ (5 ವರ್ಷ) ಇವರನ್ನು ಟ್ರಾಕ್ಟರ್‌ನ ಚಕ್ರಗಳ ಮೇಲಿರುವ ಮಡ್‌ಗಾರ್ಡ್‌ಗಳ ಮೇಲೆ ಕುಳ್ಳಿರಿಸಿಕೊಂಡು ಅಪಾಯಕಾರಿಯಾದ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿದ್ದು ಅವರ ಜೀವ ಮತ್ತು ದೈಹಿಕ ಸುರಕ್ಷತೆಗೆ ಗಂಭೀರ ಗಾಯ ಉಂಟು ಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ. 125 (b) ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಮೂರನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 1 ನೇ ಆರೋಪಿಯಾದ ನೀನು ಮಧ್ಯಸಾರದ (ಸುಮಾರು 200 ಮಿ.ಗ್ರಾಂ/100 ಮಿ.ಲೀ ರಕ್ತದಲ್ಲಿ) ಅಮಲಿನಲ್ಲಿದ್ದು, ಅಪಾಯಕಾರಿಯಾಗಿ ಟ್ರಾಕ್ಟರ್ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿದ್ದು ಹಾಗೂ ಮಕ್ಕಳು ಟ್ರಾಕ್ಟರ್ ಮೇಲಿಂದ ಕೆಳಗೆ ಬಿದ್ದರೆ ಪ್ರಾಣ ಹೋಗುವ ಅಥವಾ ಮರಣ ಹೊಂದುವ ಸಂಭವವಿರುತ್ತೆಂದು ತಿಳಿದಿದ್ದರೂ ಸಹ ವಾಹನ ಚಾಲನೆ ಮಾಡಿಕೊಂಡು ಹೋಗಿದ್ದು ಹಾಗೂ ಸದರಿ ವಾಹನವು ನಿಯಂತ್ರಣ ಕಳೆದುಕೊಂಡು ಪಟ್ಟಂದೂರು ಅಗ್ರಹಾರ ಕೆರೆಯಲ್ಲಿ ಟ್ರಾಕ್ಟರ್ ಪಲ್ಟಿಯಾಗುವಂತೆ ಮಾಡಿ, ಕುಮಾರಿ ಯಾನ್ಸಿಕ ಭಟ್ಟರಿಗೆ ತೀವ್ರ ರಕ್ತಗಾಯಗಳಾಗಿ ಸಾವು ಸಂಭವಿಸಲು ಹಾಗೂ ಕುಮಾರಿ ಹಿಮಂಸಿಕ ಭಟ್ಟರಿಗೆ ತೀವ್ರ ರಕ್ತಗಾಯಗಳು ಆಗುವಂತೆ ಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ. 105 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ನಾಲ್ಕನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 1 ನೇ ಆರೋಪಿಯಾದ ನೀನು ಮಧ್ಯಸಾರದ (ಸುಮಾರು 200 ಮಿ.ಗ್ರಾಂ/100 ಮಿ.ಲೀ ರಕ್ತದಲ್ಲಿ) ಅಮಲಿನಲ್ಲಿದ್ದು, ಸಾರ್ವಜನಿಕ ರಸ್ತೆಯಲ್ಲಿ ಟ್ರಾಕ್ಟರ್ ವಾಹನವನ್ನು ಚಾಲನೆ ಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ಮೋಟಾರು ವಾಹನ ಅಧಿನಿಯಮ ಕಲಂ. 185 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಐದನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 1 ನೇ ಆರೋಪಿಯಾದ ನೀನು ನೊಂದಣಿ ಸಂಖ್ಯೆ ಇಲ್ಲದ ವಾಟರ್ ಟ್ಯಾಂಕರ್ ಜೋಡಣೆಯಾಗಿರುವ ಟ್ರಾಕ್ಟರ್ ವಾಹನವನ್ನು ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ಮೋಟಾರು ವಾಹನ ಅಧಿನಿಯಮ ಕಲಂ. 39, 192 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಆರನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 1 ನೇ ಆರೋಪಿಯಾದ ನೀನು ವಿಮೆ ಇಲ್ಲದ ವಾಹನವನ್ನು ಸಾರ್ವಜನಿಕ ರಸ್ತೆಯಲ್ಲಿ ಚಾಲನೆ ಮಾಡಿದ್ದು ಆದ್ದರಿಂದ ಆರೋಪಿಯಾದ ನೀನು ಭಾರತೀಯ ಮೋಟಾರು ವಾಹನ ಅಧಿನಿಯಮ ಕಲಂ. 146, 196 ರನ್ವಯ ಅಪರಾಧ ಮಾಡಿರುತ್ತೀರಿ ಮತ್ತು

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ **06** ನೇ ಫೆಬ್ರವರಿ, **2026**)

**(ಶ್ರೀಮತಿ ಬಿ.ಎಸ್.ರೇಖಾ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.